sanction ಮಾಡಬೇಕಲ್ಲ.

ಶ್ರೀ ಸಿದ್ದರಾಮಯ್ಯ : ನಿಮ್ಮ ಆದೇಶ ರದ್ದಾಗಿದೆ. ಹೊಸ ಆದೇಶ ಆಗಬೇಕು.

ಶ್ರೀ ಎ.ಎಸ್. ಪಾಟೀಲ್ : ರದ್ದು ಮಾಡಿದ್ದೀರಿ.

ಶ್ರೀ ಸಿದ್ದರಾಮಯ್ಯ : ಆದೇಶ ಮಾಡುತ್ತೇನೆಂದು ಹೇಳಿ.

ಶ್ರೀ ಎ. ನಾರಾಯಣ ಸ್ವಾಮಿ : ನಾನು ಸ್ಥಳಕ್ಕೆ ಭೇಟಿ ನೀಡುತ್ತೇನೆ, ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ : ಆದೇಶ ಮಾಡುತ್ತೇನೆಂದು ಹೇಳಿ.

ಶ್ರೀ ಎ. ನಾರಾಯಣ ಸ್ವಾಮಿ : ನಾನು ಆದೇಶ ಮಾಡದೇ ಬರುತ್ತೇನಾ ?

ಶ್ರೀ ಎ.ಎಸ್ ಪಾಟೀಲ್ : ಅಲ್ಲಿ deep ಅಗಿ foundation ಹೋಗುತ್ತದೆ.

ಶಕ್ತಿ ಗಣಪತಿ ನಗರದಲ್ಲಿ/ಶಂಕರ್‌ನಾಗ್ ಬಸ್ ನಿಲ್ದಾಣ ನಿರ್ಮಿಸುವುದು

41 (509) ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್) :– ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮಹಾಲಕ್ಷ್ಮಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಾರ್ಡ್ ಸಂ. 74 ಶಕ್ತಿ ಗಣಪತಿ ನಗರದಲ್ಲಿ ಶಂಕರ್‌ನಾಗ್ ಬಸ್ ನಿಲ್ದಾಣವನ್ನು ನಿರ್ಮಿಸಲು ಸರ್ಕಾರದ ಗಮನದಲ್ಲಿದೆಯೇ ;

ಆ) ಹಾಗಿದ್ದಲ್ಲಿ, ಸದರಿ ಬಸ್ ನಿಲ್ದಾಣವನ್ನು ಎಂದು ನಿರ್ಮಿಸಲಾಗುವುದು ಮತ್ತು ಸಾರ್ವಜನಿಕ ಉಪಯೋಗಕ್ಕಾಗಿ ಯಾವಾಗ ಲಭ್ಯವಾಗಲಿದೆ.

ಇ) ಶಂಕರ್‌ನಾಗ್ ಬಸ್ ನಿಲ್ದಾಣದಿಂದ ಬಹಳಷ್ಟು ಮಾರ್ಗದ ಬಸ್‌ಗಳು ಓಡಾಡುತ್ತಿದ್ದು, ಈ ಬಸ್‌ಗಳಲ್ಲಿ ವಿದ್ಯಾರ್ಥಿಗಳು ಶಾಖೆಗಳಿಗೆ ತೆರಳುತ್ತಿರುವ ಕಾರಣ ಹಾಗೂ ಪ್ರಯಾಣಿಕರ ಅನುಕೂಲಕ್ಕಾಗಿ ಮಾಸಿಕ/ವಾರ್ಷಿಕ ಶಾಲಾ ಪಾಸ್ ಕೌಂಟರ್ ತೆರೆಯಲು ಇಲಾಖೆಯ ಗಮನ ಹರಿಸುವುದೇ ವಿವರವಾದ ಮಾಹಿತಿ ನೀಡುವುದು.

ಶ್ರೀ ಆರ್ ಅಶೋಕ್ : (ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು):–

ಅ) ಹೌದು, ಬಸ್ ನಿಲ್ದಾಣ ನಿರ್ಮಿಸಲು ಅವಶ್ಯವಿರುವ ನಿವೇಶನವನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ಹಸ್ತಾಂತರಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನಿವೇಶವನ್ನು ಹಸ್ತಾಂತರಿಸಿದ ನಂತರ ನೂತನ ಬಸ್ ನಿಲ್ದಾಣ ನಿರ್ಮಾಣ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು.

ಇ) ನೂತನ ಬಸ್ ನಿಲ್ದಾಣ ನಿರ್ಮಾಣ ಮಾಡುವ ಸಮಯದಲ್ಲಿ, ನಿಲ್ದಾಣದಲ್ಲಿನ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರ ಜೊತೆ ಬಸ್‌ಪಾಸ್ ವಿತರಿಸುವ ಕೌಂಟರ್ ಸಹ ತೆರೆಯಲು ಸ್ಥಳಾವಕಾಶವನ್ನು ಕಲ್ಪಸಲಾಗುವುದು.

41 (509) ಶ್ರೀ ನೆ.ಲ. ನರೇಂದ್ರಬಾಬು :– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರದಲ್ಲಿ ಮಹಾನಗರ ಪಾಲಿಕೆಯಿಂದ ಈ ಜಾಗವನ್ನು ಹಸ್ತಾಂತರಿಸಬೇಕು ಎಂಬ ಮಾಹಿತಿ ಇದೆ. ಇದು ತಪ್ಪು ಮಾಹಿತಿ. ನಾನು ಶಾಸಕ ಆಗುವುದಕ್ಕಿಂತ ಮುಂಚೆ ತಾವು ಅಲ್ಲಿಯ ಶಾಸಕರಾಗಿದ್ದೀರಿ. ಕಮಲಾನಗರದ ವಾರ್ಡ್ ವ್ಯಾಪ್ತಿಯಲ್ಲಿ ಅದು ಬರುತ್ತಿತ್ತು. ಈಗ ಶಕ್ತಿ ಗಣಪತಿ ವಾರ್ಡ್‌ನಲ್ಲಿ ಬರತಕ್ಕಂಥ ಅದು ಸರ್ಕಾರಿ ಜಾಗ ಎಂಬುದು ತಮಗೂ ಗೊತ್ತಿದೆ. ಈಗಾಗಲೇ ಬಿಎಂಟಿಸಿ ಯವರು ಆ ಜಾಗದಲ್ಲಿದ್ದಾರೆ. ನೀವು ಶಾಸಕರಾಗಿದ್ದಾಗ, ಎಂ. ಶ್ರೀನಿವಾಸ್‌ರವರು ಶಾಸಕರಾಗಿದ್ದಾಗ, ಆವತ್ತಿನಿಂದ ಇಲ್ಲಿಯವರೆಗೂ ಅದು ಸರ್ಕಾರದ ಅಂದರೆ ಬಿಎಂಟಿಸಿ ವ್ಯಾಪ್ತಿಯಲ್ಲಿದೆ. ತಮಗೆ ಯಾರು ತಪ್ಪು ಮಾಹಿತಿ ಕೊಟ್ಟರೋ ಗೊತ್ತಿಲ್ಲ. ಅದು ಮಹಾನಗರಪಾಲಿಕೆಗೆ ಸೇರಿದ ಜಾಗವೇ ಅಲ್ಲ. ಮಹಾನಗರಪಾಲಿಕೆಯವರು ಸರ್ಕಾರದ ಜಾಗದಲ್ಲಿ ಒಂದು ಐಪಿಪಿ ಸೆಂಟರ್, ಟೈಲರಿಂಗ್ ಸೆಂಟರ್ ಅನ್ನು ಹಿಂಭಾಗದಲ್ಲಿ ಕಟ್ಟಿದ್ದಾರೆ. ಅದರ ಹಿಂಭಾಗದಲ್ಲಿ ಸರ್ಕಾರದ ಪಶು ವೈದ್ಯಶಾಲೆ ಇದೆ. ತಾವೂ ಸಹ ನಾನು 2–3 ಸಲ ಪತ್ರ ಕೊಟ್ಟಾಗ ನನಗೆ ಭರವಸೆ ಕೊಟ್ಟಿದ್ದಿರಿ. ಇದೊಂದು ಒಳ್ಳೆಯ asset. ಅದು ನಿಮ್ಮ property. ನೀವು ಅದರ possession ನಲ್ಲಿ ಇದ್ದೀರಿ. ಅಲ್ಲಿ ಒಂದು ಕಡೆಗೆ ಕಸದ ರಾಶಿ, ಇನ್ನೊಂದು ಇತ್ತೀಚೆಗೆ ಶೌಚಾಲಯ ಇದೆ. ಅಲ್ಲಿ ಕಸದ ರಾಶಿ ಬಿದ್ದಿರುತ್ತದೆ ಎಂದು ಪ್ರತಿನಿತ್ಯ ಪತ್ರಿಕೆಗಳಲ್ಲಿ ವರದಿಯಾಗುತ್ತಿರುತ್ತದೆ. ಅಲ್ಲಿ ಶೌಚಾಲಯ ಕಟ್ಟಿದ್ದರೂ ಸಹ ಜನರು ಹೊರಗಡೆಯೇ ಮೂತ್ರ ವಿಸರ್ಜನೆ ಮಾಡುತ್ತಾರೆ. ರಾತ್ರಿ ಅದು ಖಾಸಗಿ ವಾಹನಗಳ ನಿಲ್ದಾಣವಾಗಿದೆ. ದಯವಿಟ್ಟು ಈ ಆಸ್ತಿಯನ್ನು ನೀವು ತಮ್ಮ ವಶಕ್ಕೆ ತೆಗೆದುಕೊಂಡು, ಬೇಗ

ಅಲ್ಲಿ ಸುಸಜ್ಜಿತವಾದ ಬಸ್ ನಿಲ್ದಾಣ ನಿರ್ಮಿಸಿ. ನೀವು ಅದನ್ನು ನರ್ಮ್ ಯೋಜನೆಯಲ್ಲಿ ಮಾಡುತ್ತೀರೋ ಅಥವಾ ಬೇರೆ ಯಾವ ಯೋಜನೆ ಮಾಡುತ್ತೀರೋ ಗೊತ್ತಿಲ್ಲ, ಬೇಗ ನಿಲ್ದಾಣ ಕಟ್ಟಿ. ನೀವು ಬೇಗ ಅಲ್ಲಿರುವ property ಯನ್ನು ತಮ್ಮ possession ಗೆ ತೆಗೆದುಕೊಂಡರೆ ಒಳ್ಳೆಯದು. ನನಗೆ ಗೊಂದಲ ಏನೆಂದರೆ, ಸರ್ಕಾರದ ಆಸ್ತಿಯನ್ನು ಸರ್ಕಾರಕ್ಕೇ ಕೊಡುವಂಥಾದ್ದು ಆಗಬಾರದು. ನಾನು ಈ ಬಗ್ಗೆ ಡಿ.ಸಿ. ಅಯ್ಯಪ್ಪ ಅವರೊಂದಿಗೂ ಸಹಾ ಮಾತನಾಡಿದ್ದೇನೆ. ಈ ಬಗ್ಗೆ ಅವರಿಗೆ ಪತ್ರವೊಂದನ್ನೂ ಸಹ ಬರೆದಿದ್ದೇನೆ. ತಮ್ಮ ಇಲಾಖೆಯಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ತಾವು ಸೂಚನೆ ಕೊಟ್ಟರೆ, ವರ್ಗಾವಣೆಯಾದರೆ, ನಿಮಗೇ ಒಳ್ಳೆಯ ಆಸ್ತಿ ಉಳಿಯುವಂತಾಗುತ್ತದೆ. ನಿಮ್ಮ possession ನಲ್ಲಿರುವ ಆಸ್ತಿಯನ್ನು ಇನ್ನೊಂದು ಸಾರಿ ವರ್ಗಾವಣೆ ಮಾಡಬೇಕೇ ? ಈ ಬಗ್ಗೆ ನೋಡಿ. ಇಲ್ಲಿ ನಿಮಗೇ ಗೊತ್ತು, ಬೆಳಿಗ್ಗೆಯಿಂದ ಸಂಜೆಯವರೆಗೂ 40–50 ಸಾವಿರ ಜನ ಅಲ್ಲಿಂದಿಲ್ಲಿಗೆ ಬಸ್ ರೂಟ್‌ಗಳಲ್ಲಿ shuttle ಆಗುತ್ತಿರುತ್ತಾರೆ. ಇದೆಲ್ಲಾ ಆಗುವವರೆಗೂ ಶಾಲಾ ಮಕ್ಕಳಿಗೆ ಮೆಟಲ್ ಬಾಕ್ಸ್ ಅಥವಾ ಕಿಯಾಸ್ಕ್ ರೂಪದಲ್ಲಿ 10–20 ಸಾವಿರ ರೂ.ಗಳ ವೆಚ್ಚದಲ್ಲಿ ಒಂದು ಟೆಂಪರರಿ ಕೌಂಟರನ್ನಾದರೂ ಮಾಡಬಹುದು: ದಯವಿಟ್ಟು ಕೂಡಲೇ ನನಗೊಂದು ಭರವಸೆ ಕೊಡಿ. ಇದನ್ನು possession ಗೆ ತೆಗೆದುಕೊಂಡು, ಯಾವಾಗ ಮಾಡಬೇಕೆಂಬ ಬಗ್ಗೆ ನೀಲಿ ನಕಾಶೆಯೊಂದನ್ನು ತಯಾರಿಸಿ, ಒಂದು ಸಮಗ್ರವಾದ ಯೋಜನೆ ಮಾಡಿದರೆ, ಬಹುಶಃ ನಿಮಗೂ ಮತ್ತು ನನಗೂ ಇಬ್ಬರಿಗೂ ಒಳ್ಳೆಯ ಹೆಸರು ಬರುತ್ತದೆ. ಇಲ್ಲದಿದ್ದರೆ...

ಉಪಾಧ್ಯಕ್ಷರು : ಮಾನ್ಯ ಸಚಿವರೆ, ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಕೊಡಿ.

ಶ್ರೀ ಆರ್. ಅಶೋಕ್ : ಮಾನ್ಯ ಉಪಾಧ್ಯಕ್ಷರೆ, ಮಹಾಲಕ್ಷ್ಮಿ ವಿಧಾನ ಸಭಾ ಕ್ಷೇತ್ರದಲ್ಲಿ ಬಸ್ ನಿಲ್ದಾಣವೊಂದನ್ನು ಕಟ್ಟುವ ಬಗ್ಗೆ ನಮ್ಮದೇನೂ objection ಇಲ್ಲ, ಹಣದ ಕೊರತೆಯೂ ಇಲ್ಲ. ಇಲ್ಲಿ ಪ್ರಶ್ನೆ ಬಂದಿರುವಂಥಾದ್ದು, ಅದು ಸರ್ಕಾರಿ ಜಾಗ. ನನಗೆ ಇರುವಂತಹ knowledge ಪ್ರಕಾರ ಬೆಂಗಳೂರು ಮಹಾನಗರ ವ್ಯಾಪ್ತಿಯೊಳಗಡೆ ಇರತಕ್ಕಂಥ ಸರ್ಕಾರಿ ಜಾಗವನ್ನೆಲ್ಲಾ Revenue Department ನವರು ಕಾರ್ಪೊರೇಷನ್‌ಗೆ ವಹಿಸಿ ಬಿಟ್ಟಿದ್ದಾರೆ. ಆದ್ದರಿಂದ, ದಯವಿಟ್ಟು ಈ ಜಾಗವನ್ನು hand over ಮಾಡಿ ಎಂದು ಈಗಾಗಲೇ ನಾವು ಕಾರ್ಪೊರೇಷನ್‌ಗೆ ಎರಡು ಪತ್ರಗಳನ್ನೂ ಬರೆದಿದ್ದೇನೆ. ಮಾನ್ಯ ನರೇಂದ್ರಬಾಬುರವರು ಇದು Government land ಎಂದು ಹೇಳುತ್ತಿದ್ದಾರೆ. ನಾನು ಡಿ.ಸಿ.ಯವರಿಗೂ ಪತ್ರ ಬರೆದಿದ್ದೇನೆ. ಆ ಲ್ಯಾಂಡ್ ಅನ್ನು ಅವರಿಂದ ಪಡೆದುಕೊಂಡು, ಬಸ್ ನಿಲ್ದಾಣ ಕಟ್ಟುವುದಕ್ಕೆ

ಏನೂ ಸಮಸ್ಯೆಯಿಲ್ಲ. immediate ಆಗಿ ಅದನ್ನು ತೆಗೆದುಕೊಳ್ಳುವುದಕ್ಕೆ ನಾನು ನಮ್ಮ ಇಂಜಿನಿಯರ್ಸ್‌ಗೆ ಹೇಳುತ್ತೇನೆ. ಇಂಜಿನಿಯರ್ಸ್‌ಗಳೆಲ್ಲಾ ಇಲ್ಲೇ ಬಂದು ಕುಳಿತಿದ್ದಾರೆ. ಕೆಲಸ ಪ್ರಾರಂಭ ಮಾಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ. ಏನಾದರೂ ಸಣ್ಣ ಪುಟ್ಟ ಸಮಸ್ಯೆ ಇದ್ದರೆ ಪರಿಹರಿಸೋಣ. ನಾನು ಹಿಂದೆ ಆ ಏರಿಯಾವನ್ನು ಪ್ರತಿನಿಧಿಸುತ್ತಿದ್ದೆ. ನನಗೆ ಅದರ ಡೀಟೈಲ್ಸ್ ಎಲ್ಲಾ ಗೊತ್ತಿದೆ. ಅಲ್ಲಿ ಬಸ್ ನಿಲ್ದಾಣ ಆಗಬೇಕೆಂದು ಕೆಲವರು, ಆಗಬಾರದು ಎಂದು ಕೆಲವರು ಇದ್ದಾರೆ. ನಾನು ಇದ್ದಾಗ ಈ ತರಹದ್ದೆಲ್ಲಾ ಗೊಂದಲವಿತ್ತು. ಈಗೆಲ್ಲಾ ಸರಿ ಹೋಗಿದೆ ಎಂದು ಭಾವಿಸುತ್ತೇನೆ. ಅಲ್ಲಿ ಬಸ್ ನಿಲ್ದಾಣ ಕಟ್ಟಿಸಿಕೊಡುವುದರಲ್ಲಿ ಏನೂ ಸಮಸ್ಯೆಯಿಲ್ಲ. ನಾವು ನಿಮ್ಮ ಜೊತೆಗಿದ್ದೇವೆ. ಅಲ್ಲಿ ನಿಲ್ದಾಣ ಕಟ್ಟಿಸಿಕೊಡುವುದಕ್ಕೆ ಏನೇನು ಮಾಡಬೇಕೋ, ಅದೆಲ್ಲವನ್ನೂ ಮಾಡುತ್ತೇವೆ. ಅದು ಕಾರ್ಪೊರೇಷನ್‌ಗೆ ಸೇರಿದ್ದಲ್ಲ ಎನ್ನುವುದಾದರೆ, ಈ ವಾರದಲ್ಲೇ ಈ ಬಗ್ಗೆ Revenue Department ಗೆ ಪತ್ರ ಬರೆದು, ಈ ಜಾಗವನ್ನು hand over ಮಾಡಲಿಕ್ಕೆ ಹೇಳುತ್ತೇವೆ. ಅವರಿಂದ ಆದರೆ ನಮಗೆ ಇನ್ನೂ easy ಆಗುತ್ತದೆ, ಜಾಗ free ಆಗಿ transfer ಆಗುತ್ತದೆ. ಅದನ್ನು ಮಾಡಿಕೊಡುತ್ತೇನೆ.

ಉಪಾಧ್ಯಕ್ಷರು : ಮುಂದಿನ ಪ್ರಶ್ನೆ ಲಾಲಾಜಿ ಆರ್. ಮೆಂಡನ್ ಅವರು ಕೇಳಬೇಕು.

ಶ್ರೀ ದಿನೇಶ್ ಆರ್. ಗುಂಡೂರಾವ್ : ಮಾನ್ಯ ಉಪಾಧ್ಯಕ್ಷರೆ, ಒಂದು ಉಪ ಪ್ರಶ್ನೆ.

ಉಪಾಧ್ಯಕ್ಷರು : ಸಾಕಷ್ಟು ಅವಕಾಶ ಕೊಟ್ಟಿದ್ದೇನೆ. ಈಗಾಗಲೇ ಸಮಯವಾಯಿತು.

ಶ್ರೀ ದಿನೇಶ್ ಆರ್. ಗುಂಡೂರಾವ್ : ಒಂದೇ ಒಂದು ಉಪ ಪ್ರಶ್ನೆ ಕೇಳುತ್ತೇನೆ. ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಮಾನ್ಯ ಸಾರಿಗೆ ಸಚಿವರಲ್ಲಿ ನನ್ನದೊಂದು ಕೋರಿಕೆ ಇದೆ. ಏನೆಂದರೆ, ತಮಗೆ ಗೊತ್ತಿದೆ, ಈ ಖಾಸಗಿ ಸಾರಿಗೆ ವ್ಯವಸ್ಥೆಯಲ್ಲಿ, ಅದರಲ್ಲೂ ಕೂಡ ನಮ್ಮ ಕ್ಷೇತ್ರದಲ್ಲಿ ಬಹಳಷ್ಟು ಒತ್ತಡ ಇದೆ. ತಾವು ಎಲ್ಲಾ ಕಡೆ ಈ ರೀತಿಯ ಕೇಂದ್ರ ಸರ್ಕಾರದ ನರ್ಮ್ ನೆರವಿನಿಂದ ಹೊಸ ಒಳ್ಳೊಳ್ಳೆಯ TTMC ಗಳನ್ನು ನಿರ್ಮಿಸುತ್ತಿದ್ದೀರಿ. ಈಗ ನಮ್ಮಲ್ಲಿ ಸಮಸ್ಯೆ ಬಹಳ ಇದೆ. ಟ್ರಾಫಿಕ್ ಸಮಸ್ಯೆ ಸೇರಿ ಎಲ್ಲಾ ರೀತಿಯ ಗೊಂದಲ ನಮ್ಮ ಗಾಂಧಿನಗರ ಕ್ಷೇತ್ರದಲ್ಲಿದೆ. ಖಾಸಗಿ ಸಾರಿಗೆ ಮಾಲೀಕರ ಜೊತೆಯಲ್ಲಿ ತಾವು ಕುಳಿತುಕೊಂಡು ಮಾತನಾಡಿ, ಏಕೆ ಅವರಿಗೆ ಪ್ರತ್ಯೇಕವಾದ ವ್ಯವಸ್ಥೆಯನ್ನು ಮಾಡಬಾರದು? ಇವತ್ತು ಅಲ್ಲಿ ಇಡೀ ದಿವಸ ಪೂರ್ತಿ ಜಂಜಾಟ ಇರುತ್ತದೆ ರಾತ್ರಿ ಕೂಡ ಅದೇ ಸಮಸ್ಯೆಗಳಿವೆ. ಆದ್ದರಿಂದ, ತಾವು ಖಾಸಗಿ ಸಾರಿಗೆ ಮಾಲೀಕರ ಜೊತೆಯಲ್ಲಿ

ಕುಳಿತುಕೊಂಡು, ಅದೇ ರೀತಿಯ ಸಹಭಾಗಿತ್ವದಲ್ಲಿ ಏಕೆ ಒಂದು ಬಸ್ ನಿಲ್ದಾಣ ನಿರ್ಮಿಸತಕ್ಕಂಥ ಪ್ರಯತ್ನ ಮಾಡಬಾರದು? ಅಥವಾ ಇರತಕ್ಕಂಥ ವ್ಯವಸ್ಥೆಯನ್ನೇ ಅವರೊಂದಿಗೂ ಕೂಡ ತಾವು ಒಂದು ರೀತಿಯಾಗಿ ಒಪ್ಪಂದವೊಂದನ್ನು ಮಾಡಿಕೊಂಡು ಉಪಯೋಗಿಸತಕ್ಕಂಥ ವ್ಯವಸ್ಥೆಯನ್ನು ಏಕೆ ಮಾಡಬಾರದು? ದಯವಿಟ್ಟು ತಾವು ಇದರ ಬಗ್ಗೆ ಹೆಚ್ಚಿನ ಗಮನ ಕೊಡಬೇಕು. ನಿನ್ನೆ ತಾನೇ KSRTC ಗೆ ಒಳ್ಳೆಯ ನಿರ್ವಹಣೆಗಾಗಿ ಪ್ರಶಸ್ತಿಯೊಂದು ಲಭಿಸಿದೆ. ಅದಕ್ಕಾಗಿ ನಾನು ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮ ಈ ಒಂದು ಕ್ಷೇತ್ರದಲ್ಲಿ ವಿಶೇಷವಾಗಿ ಏನೊಂದು ವಾಹನ ಸಾಂದ್ರತೆ ಏನಿದೆ, ಅದು ಬಹಳಷ್ಟು ಸಲ ರಾತ್ರಿ 10–11 ಗಂಟೆಯವರೆಗೂ ಕೂಡ ಇರುತ್ತದೆ.

ಉಪಾಧ್ಯಕ್ಷರು : ಮಾನ್ಯ ದಿನೇಶ್‌ರವರೆ, ಈಗಾಗಲೇ ಸಾಕಷ್ಟು ಸಮಯವಾಗಿದೆ. ಅದರ ಬಗ್ಗೆ ತಾವು separate ತನ್ನಿ. ಆಗ ನಾನು ನಿಮಗೆ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ದಿನೇಶ್ ಆರ್. ಗುಂಡೂರಾವ್ : ಮಾನ್ಯ ಉಪಾಧ್ಯಕ್ಷರೆ, ಅಲ್ಲಿ ತೀವ್ರ ಸಮಸ್ಯೆ ಇದೆ. ಅದು ನಿಮಗೂ ಗೊತ್ತಿದೆ. ಅದರ ಬಗ್ಗೆ separate ಆಗಿ ಪ್ರಸ್ತಾಪಿಸುತ್ತೇನೆ. ದಯವಿಟ್ಟು ಮಾನ್ಯ ಸಚಿವರು ಈಗ ನಾನು ಪ್ರಸ್ತಾಪಿಸಿದ್ದಕ್ಕೆ ಉತ್ತರ ಕೊಡಬೇಕು.

ಶ್ರೀ ಆರ್. ಅಶೋಕ್ : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಮಾನ್ಯ ಗುಂಡೂರಾವ್‌ರವರ ಕ್ಷೇತ್ರದಲ್ಲಿ ಕೆಂಪೇಗೌಡ ಬಸ್ ನಿಲ್ದಾಣ ಇದೆ. ಸುಮಾರು 1400 ಕೋಟಿ ರೂ.ಗಳ ವೆಚ್ಚದಲ್ಲಿ ಅಂತರರಾಷ್ಟ್ರೀಯ ಮಟ್ಟದ ಬಸ್ ನಿಲ್ದಾಣವೊಂದನ್ನು ಅಲ್ಲಿ ನಿರ್ಮಿಸಲು ಈಗಾಗಲೇ ಎಲ್ಲಾ ಪ್ರಕ್ರಿಯೆ ಆಗಿದೆ ಟೆಂಡರ್ ಎಲ್ಲಾ finalise ಆಗುತ್ತಿದೆ, ಅದು ಈಗ ಅಂತಿಮ ಹಂತಕ್ಕೆ ಬರುತ್ತಿದೆ. ಅದು ಬಂದರೆ, ಅದು ಇಡೀ ದೇಶದಲ್ಲೇ ಅದೊಂದು ಮಾದರಿಯಾದಂತಹ ಬಸ್ ನಿಲ್ದಾಣ ಆಗುತ್ತದೆ. ತಾವು private ಬಸ್ ನಿಲ್ದಾಣ ಬಗ್ಗೆಯೂ ಮಾತನಾಡಿದಿರಿ. ಮಾನ್ಯ ಸಿದ್ದರಾಮಣ್ಣನವರು ಮಾತನಾಡುವಾಗ, ನನಗಿಂತ ಹಿಂದೆ ನಾನು ಈ ಖಾತೆಯಲ್ಲಿದ್ದೆ ಎಂದು ಹೇಳಿದರು. ನಾವು ರೂಲ್ಸ್‌ವೊಂದನ್ನು ಮಾಡಿಕೊಂಡಿದ್ದೇವೆ. ನಮ್ಮ ಬಸ್ ನಿಲ್ದಾಣದ 500 ಮೀಟರ್ ದೂರದಲ್ಲಿ ಯಾವುದೇ ಖಾಸಗಿ ಬಸ್ ನಿಲ್ಲಿಸುವಂತಿಲ್ಲ ಎಂದು ನಮ್ಮ ರೂಲ್ಸ್‌ನಲ್ಲೇ ನಾವು ಮಾಡಿಬಿಟ್ಟಿದ್ದೇವೆ. ಯಾರಿಗೂ ನಮ್ಮ bus station ನೊಳಗೆ allow ಮಾಡುವುದಕ್ಕಾಗುವುದಿಲ್ಲ. ನಾವು ಒಂದು ಸಾರಿ allow ಮಾಡಿದರೆ ಬಹಳ

ಅನಾಹುತವಾಗುತ್ತದೆ. ಸರ್ಕಾರಿ ಆಸ್ಪತ್ರೆ ಪಕ್ಕ private ಆಸ್ಪತ್ರೆ ಇದ್ದರೆ, ಅವರು ಸರ್ಕಾರಿ ಆಸ್ಪತ್ರೆಯನ್ನು ಮುಳುಗಿಸಿ ಬಿಡುತ್ತಾರೆ. ಹಾಗೆಯೇ, ನಮ್ಮ ಸಂಸ್ಥೆಯೂ ಮುಳುಗಿ ಹೋಗುತ್ತದೆ. ಆದ್ದರಿಂದ, ಎಲ್ಲೆಲ್ಲಿ ನಮ್ಮ ಬಸ್ ಸ್ಟ್ಯಾಂಡ್‌ಗಳು ಇವೆಯೋ, ಅಲ್ಲಿ ನಾವು ಖಾಸಗಿಯವರಿಗೆ allow ಮಾಡುವುದಕ್ಕೆ ಆಗುವುದಿಲ್ಲ. ಅದು ಸರಿಯಾದಂತಹ ಕ್ರಮವಲ್ಲ. ಆ ರೀತಿ ಮಾಡುವುದರಿಂದ ಈ ಸರ್ಕಾರಿ ಸಂಸ್ಥೆ ಮುಳುಗಿ ಹೋಗುತ್ತದೆ. ಆದ್ದರಿಂದ ಅದನ್ನು ಮಾಡುವುದಿಲ್ಲ. ಪ್ರೈವೇಟ್ ನಿಲ್ದಾಣವೊಂದನ್ನು ಈಗ ಮಾಡುತ್ತಿದ್ದೇವೆ. ವಿಕ್ಟೋರಿಯಾ ಆಸ್ಪತ್ರೆ ಎದುರುಗಡೆ, ತಮಗೂ ಗೊತ್ತಿದೆ, ಅಲ್ಲೊಂದು ಜಾಗ ಇದೆ. ಈಗಾಗಲೇ ಸುಮಾರು 8 ಎಕರೆ ಜಾಗ ಅಲ್ಲಿದೆ. PPP model ನಲ್ಲಿ, ಕಾರ್ಪೊರೇಷನ್, ನಾವು ಮತ್ತು ಪ್ರೈವೇಟ್‌ನವರು, ಮೂರೂ ಜನ ಸೇರಿ ಅದನ್ನು ಮಾಡುವುದಕ್ಕೆ ಈಗ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಪ್ರೈವೇಟ್‌ನವರಿಗೆ ಅಲ್ಲೊಂದು ಬಸ್ ನಿಲ್ದಾಣ ಮಾಡುತ್ತಿದ್ದೇವೆ. ಅಲ್ಲಿರುವ ಪ್ರಾಪರ್ಟಿ ನಮ್ಮದಲ್ಲ. ಅದು ಕಾರ್ಪೊರೇಷನ್ ಪ್ರಾಪರ್ಟಿಯಾಗಿದೆ. ಅವರಿಗೆ ನಮಗೆ ಕೊಡುವುದಕ್ಕೆ ಅಧಿಕಾರ ಇದೆ. ಅಲ್ಲಿ ನಾವು ಮಾಡುತ್ತೇವೆ. ಉಳಿದ ಕಡೆ ನಾವು ಸೇರಿಸುವಂಥಾದ್ದು ಸಂಸ್ಥೆಯ ಹಿತದೃಷ್ಟಿಯಿಂದ ಒಳ್ಳೆಯದಲ್ಲ ಎಂಬುದು ನನ್ನ ಭಾವನೆ.

ಪ್ರಶ್ನೆ ಸಂಖ್ಯೆ : 40 (211)

(ಮಾನ್ಯ ಸದಸ್ಯರಾದ ಲಾಲಾಜಿ ಆರ್. ಮೆಂಡನ್ ಗೈರು ಹಾಜರಾಗಿದ್ದರು)

ವಿದ್ಯುಚ್ಛಕ್ತಿ ಸರಬರಾಜು ಇಲ್ಲದ ಮನೆಗಳು

43 (82) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ):– ಇಂಧನ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ಮನೆಗಳಿಗೆ ವಿದ್ಯುಚ್ಛಕ್ತಿ ಇರುವುದಿಲ್ಲ (ಹೋಬಳಿವಾರು ಮಾಹಿತಿ ಒದಗಿಸುವುದು);

ಆ) ವಿದ್ಯುಚ್ಛಕ್ತಿ ಇಲ್ಲದ ಮನೆಗಳಿಗೆ ಯಾವಾಗ ವಿದ್ಯುಚ್ಛಕ್ತಿ ಸಂಪರ್ಕ ನೀಡಲಾಗುವುದು;

ಇ) ವಿದ್ಯುಚ್ಛಕ್ತಿ ಇಲ್ಲದ ಕ್ಷೇತ್ರದ ಮೇಲ್ಕಂಡ ಮನೆಗಳಿಗೆ ವಿದ್ಯುಚ್ಛಕ್ತಿ ನೀಡಲು ತಗಲುವ ವೆಚ್ಚವೆಷ್ಟು?